**IN THE COURT OF III ADDL. CIVIL JUDGE & JMFC**
**AT BELGAUM**
**(PRESENTED OVER BY SMT. LAKSHMI G M)**

**FDP/0000002/2001**

**APPELLANTS :**

1. Shri. Laxman Appayya Chalawadi
 R/o. Macche, Tal and Dist Belgaum.

VERSUS

**RESPONDENTS :**

1. Smt. Shantavva w/o. Shankar Chalawadi
 R/o. Macche , Tal and Dist Belgaum.
2. Smt. Annapurna w.o, vithal chalawadi,
 R/o. Parishwad, Near PWD Bungalow, Taluka Khanapur, Dist Belgaum.
3. Shri. Kalpana D/o. Shankar Chalawadi,
 R/o. Macche, Tal and Dist Belgaum.
4. Savita D/o. Shankar Chalawadi,
 R/o. Macche, Tal and Dist Belgaum.
5. Anjana D/o. Shankar Chalawadi
 R/o. Macche, Tal and Dist Belgaum.
6. Premanand S/o. Shankar Chalawadi
 R/o. Macche, Tal and Dist Belgaum.
7. Shridevi D/o Shankar Chalawadi
 R/o. Macche, Tal and Dist Belgaum.
8. Smt. Pammavvwa w/o. Vasu Chalawadi
 R/o. Macche, Tal and Dist Belgaum.
9. Shri. Yallappa s/o. Vasu Chalawadi
 R/o. Macche, Tal and Dist Belgaum.
10. Prasu S/o. Vasu Chalawadi
 R/o. Macche, Tal and Dist Belgaum.
11. Shri. Bhomanna Punnappa Chalawadi
 R/o. Macche, Tal and Dist Belgaum.
12. Kallappa Yallappa Chalawadi
 R/o. Kangral galli, Tal and Dist Belgaum.
13. Shri. Basu Yallappa Chalwadi

R/o. Macche, Tal and Dist Belgaum.
14. Kasturi w/o. Anand Kamble
R/o. Goundwad, Tal and Dist Belgaum,
15. Surekha w/o. Ningappa Kambale
R/o. Ambewadi, Tal and dist Belgaum.
16. Papul Basanne Mutagekar
R/o. Machhe Tal and Dist Belgaum.
17. Maruti Mallappa Manganonkar
R/o. Machhe Tal and Dist Belgaum.
18. Yallappa Bharamanna Pote
R/o. Machhe Tal and Dist Belgaum.
19. Anusaya Babu Ghodake
R/o. Machhe Tal and Dist Belgaum.
20. Madhu Babu Ghodake
R/o. Machhe Tal and Dist Belgaum.
21. Shri. Vijaya Babu Ghodake
R/o. Machhe Tal and Dist Belgaum.

---------------------------------------------------------------------------

Shri. B.A. Gangai, Advocate for the appellant.

---------------------------------------------------------------------------

**ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮಎಫಸಿ ನ್ಯಾಯಾಲಯ ಬೆಳಗಾವಿ**

**ಅಸಲು ದಾವಾ ನಂಃ 2-2001**
**ಪಿ. ಡಬ್ಲೂ-1**

**ದಿಃ 20-01-2016 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ.**

**ಈ ದಾವೆ ಯಾರು ಮಾಡಿದ್ದಾರೆ ಮತ್ತು ಯೂಕೆ ಮಾಡಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ಯಾರು ದಾವೆ ಹೂಡಿದ್ದಾರೆ ಮತ್ತು ಯಾವ ಕಾರಣಕ್ಕೆ ಎನ್ನುವುದು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ನೀಲಪ್ಪ ಅಪ್ಪಯ್ಯ ಚಲವಾದಿ. ನನ್ನ ಅಜ್ಜನ ಜನನ ಹಾಗೂ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅಜ್ಜನ ಮಕ್ಕಳ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜನಿಗೆ ಯಾರೂ ಮಕ್ಕಳಿರಲಿಲ್ಲ ಅವರು ಅವಿವಾಹಿತ ಮತ್ತು ಹಾಗೆ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ನೀಲಪ್ಪ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಲಕ್ಷ್ಮಣ ಅಪ್ಪಯ್ಯ ಚಲವಾದಿ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು 3ನೇ ಸರಗತಿವರೆಗೆ ಓದಿರುತ್ತೇನೆ. ನನ್ನ ತಂದೆ ತಾಯಿ ಹೆಸರು ಇರುವ ಬಗ್ಗೆ ದಾಖಲಾತಿ ಅಥವಾ ನನ್ನ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಇದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ಮಚ್ಚೆಯ ಖಾಯಂ ನಿವಾಸಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಲಕ್ಷ್ಮಣ ಅಪ್ಪಯ್ಯ ಮತ್ತು ನೀಲಪ್ಪ ಇಬ್ಬರೂ ಸಹೋದರರು ಎಂದು ತೋರಿಸಲು ನನ್ನ ಮೌಖಿಕ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ಲಕ್ಷ್ಮಣ ಅಪ್ಪಯ್ಯ ಮತ್ತು ನೀಲಪ್ಪ ಅಪ್ಪಯ್ಯ ಇಬ್ಬರ ತಂದೆಯರು ಬೇರೆ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. ಇವರಿಬ್ಬರೂ ಖಾಸ ಅಣ್ಣತಮ್ಮ ಎಂದು ಸಾಕ್ಷಿ ಹೇಳಿಕೆಯಲ್ಲಿ ಬರೆದಿದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಲಕ್ಷ್ಮಣ ಯಲ್ಲಪ್ಪಾ ಚಲವಾದಿ ಕೊರ್ಟ ವ್ಯವಹಾರ ಮತ್ತು ಮನೆ ವ್ಯವಹಾರ ನೋಡಿಕೊಳ್ಳುತ್ತಿದ್ದ ಎಂದು ತೋರಿಸಲು ನಾನು ಯಾವುದೇ**

ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಇವರಿಗೆ ನೀಡಿದ ಮುಕ್ತಿಯಾರ ನಾಮಾ ಇರುವುದಿಲ್ಲ. ಶಾಂತವ್ವಾ ನೀಲಪ್ಪನ ಹೆಂಡತಿ ಎಂದು ತೋರಿಸಲು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮಚ್ಚೆಯಲ್ಲಿ ಚಲವಾದಿ ಎಂದು ಅಡ್ಡಹೆಸರು ತುಂಬಾ ಜನ ಇಟ್ಟು ಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಬ್ಬರು

ಮನೆತನ ಇರುತ್ತವೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 8 ರಿಂದ 10 ಇವರ ಅಡ್ಡ ಹೆಸರು ಚಲವಾದಿ ಎಂದು ಇರುತ್ತದೆ ಎಂದರೆ ಸರಿ. ನೇ ಪ್ರತಿವಾದಿ ಶಂಕರನ ಹೆಂಡತಿ ಎಂದರೆ ಸರಿ. ಶಂಕರ ಕೊರ್ಟನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಶಂಕರ ತೀರಿಕೊಂಡ ನಂತರ ಅವನ ಹೆಡಂತಿ ಶಾಂತವ್ವ ಕೊರ್ಟದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ ನಂ. 2 ರಿಂದ 7 ಶಾಂತವ್ವನ ಮಕ್ಕಳು ಎಂದರೆ ಸರಿ. ಇವರು ಚಲವಾದಿ ಮನೆತನದವರು ಎಂದರೆ ಸರಿ. ಇವರು ನನ್ನ ಸಂಬಂಧಿಕರು ಎಂದರೆ ಸರಿ. ಪ್ರತಿವಾದಿ ನಂ. 8 ರಿಂದ 10 ಈ ದಾವಾ ಆಸ್ತಿಗೆ ಹಕ್ಕು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 8 ರಿಂದ 10 ರವರ ಹೆಸರುಗಳು ಆರ್ ಎಸ್ ನಂ. 645-2 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಆರ್-4 ರಲ್ಲಿ ಪ್ರತಿವಾದಿ 8 ರಿಂದ 10 ರವರ ಹೆಸರುಗಳು ದಾವಾ ಆಸ್ತಿಯಾದ 645-2 ರ ಉತಾರದಲ್ಲಿ ನಮೂದಾಗಿರುತ್ತದೆ ಎಂದು ಸಾಕ್ಷಿಗೆ ತೋರಿಸಿ ಪ್ರಶ್ನಿಸಲಾಗಿ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಉತಾರಗಳು ಸುಳ್ಳು ಎಂದು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಶಾಂತವ್ವ ನನ್ನ ಅಜ್ಜಿ ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರುಪಡಿಸಿರುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆರ್-25 ರೇಶನ ಕಾರ್ಡನ್ನು ತೋರಿಸಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆರ್-25 ರಲ್ಲಿ ಶಾಂತವ್ವ ಯಾರ ಹೆಂಡತಿ ಅಥವಾ ಮಗಳು ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಶಾಂತವ್ವ ನನಗೆ ಸಂಬಂಧ ಇರುವು ದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣ ಕೇಸ್ ನಡೆಸಲು ಹಣ ನೀಡುತ್ತಿದ್ದ ನಾನು ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಪತ್ರದಲ್ಲಿ ಬರೆದದ್ದು ಬರೆದದ್ದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ 11 ರಿಂದ 15 ರವರ ಸರ್ವೆ ನಂ. 645-2 ರ ದಾವಾ ಆಸ್ತಿಯನ್ನು ಮೃತ ಶಂಕರ ತಂದೆ ಫಕೀರಾರವರಿಂದ ಖರೀದಿಸಿ ಕಟ್ಟಡ ಕಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ರತ್ನವ್ವಾ ನನ್ನ ಅಜ್ಜಿ ಎಂದು ತೋರಿಸಲು ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಇದಕ್ಕೆ ನನ್ನ ಅಜ್ಜಿಯೇ ಸಾಕ್ಷಿ ಎಂದು ನುಡಿಯುತ್ತಾರೆ. ರತ್ನವ್ವ ಮತ್ತು ನನಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರತ್ನವ್ವ ತೀರಿಕೊಂಡ ನಂತರ ನಾನು ವಾರಸುದಾರರಾಗಿ ತಹಶಿಲ್ದಾರರ ಬಳಿ ಅರ್ಜಿ ಹಾಕಿದ್ದನ್ನು ಸದರಿರವರು ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ವಾರಸುದಾರರ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದು ಮುಂದುವರೆದು ನುಡಿಯುತ್ತಾರೆ. ತಹಶಿಲ್ದಾರರು ನ್ಯಾಯಾಲಯಕ್ಕೆ ಮನವಿ ಮಾಡಿ ವಾರಸುದಾರ ಪತ್ರ ಪಡೆಯಲು ತಿಳಿಸಿರುತ್ತಾರೆ ಎಂದು ಸಾಕ್ಷಿ ಪತ್ರದಲ್ಲಿ ಬರೆದದ್ದು ಸತ್ಯ ಇರುತ್ತದೆ. ರತ್ನವ್ವ ಮತ್ತು ನನಗೆ ಸಂಬಂಧ ಇಲ್ಲ ಎಂದು ವಾರಸುದಾರ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಲವಾದಿ ಮನೆತನಕ್ಕೆ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣ ತೀರಿಕೊಂಡ ನಂತರ ಆತನ ಹೆಂಡತಿ ರತ್ನವ್ವ ಮತ್ತು ಯಲ್ಲಪ್ಪ ಲಕ್ಷ್ಮಣ ಚಲವಾದಿ ವಾರಸುದಾರರ ಎಂದು ನ್ಯಾಯಾಲಯದಿಂದ ಆದೇಶ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಹಶಿಲ್ದಾರವರಿಂದ ರತ್ನವ್ವ ಒಬ್ಬರೇ ವಾರಸುದಾರರು ಎಂದು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮಣ ತೀರಿಕೊಂಡ ನಂತರ ಲಕ್ಷ್ಮಣ ಯಲ್ಲಪ್ಪ ಚಲವಾದಿ ಮತ್ತು ಆತನ ಹೆಂಡತಿ ಇಬ್ಬರೇ ದಾವೆ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 7 ರತ್ನವ್ವ ಮತ್ತು ಯಲ್ಲಪ್ಪ ಲಕ್ಷ್ಮಣ ಇಬ್ಬರೂ ವಾರಸುದಾರರು ಅಲ್ಲ ಎಂದು ಉಚ್ಚ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಅಪೀಲು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಲಕ್ಷ್ಮಣ ವಾರಸುದಾರರು ರತ್ನವ್ವ ಮತ್ತು ಯಲ್ಲಪ್ಪ ಅಲ್ಲ ಎಂದು ನಾನು ಪ್ರಶ್ನೆ ಮಾಡುವ ಅಧಿಕಾರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ವಂಶಾವಳಿಯಲ್ಲಿ ನೀಲಪ್ಪನ ಹೆಂಡತಿ ಶಾಂತವ್ವ ಶಾಂತವ್ವನ ಮಗಳು ಪದ್ಮಾವತಿ, ಪದ್ಮಾವತಿ ಮಗಳು ನಾನು ಎಂದು ತೋರಿಸಲು ಯೂವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಅಪ್ಪಯ್ಯನಿಗೆ 5 ಮಕ್ಕಳು ಎಂದು ತೋರಿಸಲು ಯಾವುದೇ ಜನನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನಿಲಪ್ಪನ ಮಗಳು ಪದ್ಮಾವತಿ ಎಂದು ತೋರಿಸಲು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಶಾಂತವ್ವ, ಪದ್ಮಾವತಿ ಮತ್ತು ನಾನು ನೀಲಪ್ಪನಿಗೆ ಸಂಬಂಧ ಇರುವು ದಿಲ್ಲ ಎಂದರೆ ಸರಿಯಲ್ಲ. ಮೃತ ಲಕ್ಷ್ಮಣನಿಗೆ ನಾನು ಒಬ್ಬಳೇ ವಾರಸುದಾರಳು ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದ ಪತ್ರ ಇರುವುದಿಲ್ಲ ಎಂದರೆ ಸರಿ. ಲಕ್ಷ್ಮಣನ ಮಗನಾದ ಯಲ್ಲಪ್ಪ ಒಬ್ಬನೇ ವಾರಸುದಾರ ಮತ್ತು ಅವನೇ ಆಸ್ತಿಗೆ ಹಕ್ಕು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಲಕ್ಷ್ಮಣ ಅಪ್ಪಯ್ಯ ಮತ್ತು ರತ್ನವ್ವ ಯಲ್ಲಪ್ಪ ಲಕ್ಷ್ಮಣನನ್ನು ದತ್ತು ಪಡೆದಿದ್ದರಿಂದ ಅವನು ದಾವಾ ಆಸ್ತಿಗೆ ಹಕ್ಕು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ದತ್ತು ಪಡೆದ ಬಗ್ಗೆ ನಾನು ಪ್ರಶ್ನೆ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ತಹಶಿಲ್ದಾರರು ನ್ಯಾಯಾಲಯದಲ್ಲಿ ವಾರಸುದಾರಳು ಎಂದು ದಾವೆ ಹೂಡಲು ಹೇಳಿದ ಮೇರೆಗೆ ನಾನು ಎಲ್ಲಿಯೂ ದಾವೆ ಹೂಡಿ ವಾರಸುದಾರಳು ಎಂದು ಆದೇಶ ಪಡೆದಿರುವುದಿಲ್ಲ ಎಂದರೆ ಸರಿ. ಲಕ್ಷ್ಮಣ ಯಲ್ಲಪ್ಪ ರವರ ಆಸ್ತಿಗೆ ನಾನು ಪಾಲುದಾರಳು ಅಲ್ಲ ಎಂದರೆ ಸರಿಯಲ್ಲ.

ಮುಂಜಾನೆಯ ಅವಧಿ ಮುಗಿದ ಕಾರಣ ಮಧ್ಯಾಹ್ನಕ್ಕೆ ಮುಂದೂಡಲಾಯಿತು.
ವಾದಿ ಪರ ವಕೀಲರು ಸಮಯಾವಕಾಶ ಕೇಳಿರುವುದರಿಂದ ಮುಂದುವರೆದ ಪಾಟೀ ಸವಾಲಿಗೆ ಮೂಂದೂಡಲಾಯಿತು.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

-ಸಹಿ-

3ನೇ ಅಧಿಕ ಸಿವಿಲ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.